ನವಸಾಕ್ಷರ ಪುಸ್ತಕ ಮಾಲೆ ೬೨

ಜಾದೂ

ಲಕ್ಷ್ಮೀ



ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ – ೯೨

ಜಾದೂ

ಲಕ್ಷ್ಮೀ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩ ೨೭೭

JAADU : By Lakshmi. Published by The Director of Prasaranga, Kannada University, Hampi - 583 211, KARNATAKA.
First Impression 1994, Pp.ii + 26, Rs. 8.00.

ಸಂಯೋಜನಾಧಿಕಾರಿ
ಡಾ.ಎಚ್.ಎಸ್.ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩ ೨೧೧

ಮುಖಪುಟ ವಿನ್ಯಾಸ
ಕೆ.ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ಜಾದೂ

ಇದೊಂದು ಕಥೆ ಕೇಳಿರಿ.

ಇದು ಜಪಾನ್ ದೇಶದ ಒಂದು ಕಥೆ.

ಜಪಾನ್, ಜಗತ್ತಿನಲ್ಲಿ ಒಂದು ಪ್ರಸಿದ್ಧವಾದ ದೇಶ.

ಅಲ್ಲಿ ಓದುಬರಹ ಕಲಿತ ಜನರು ವಾಸಿಸುತ್ತಾರೆ.

ಇದೆಲ್ಲಾ ಈಗಿನ ಮಾತಾಯಿತು.

ಆದರೆ ಬಹಳ ಹಿಂದೆ ಹೀಗಿರಲಿಲ್ಲ.



‘ಶೂ’ ಮತ್ತು ‘ಶೀ’ ದಂಪತಿಗಳು

ಜಪಾನ್ ದೇಶದಲ್ಲಿ ಒಬ್ಬ ಮನುಷ್ಯನಿದ್ದ.

ಅವನ ಹೆಸರು "ಶೂ" ಎಂದು. ಹಾಗೇ ಹೆಣ್ಣೊಬ್ಬಳಿದ್ದಳು.

ಅವಳ ಹೆಸರು "ಶೀ" ಎಂದು. ಶೂ ಮತ್ತು ಶೀ ಗಂಡ-ಹೆಂಡತಿಯರು.

ಶೂ ಮತ್ತು ಶೀ ಒಬ್ಬರನ್ನೊಬ್ಬರು ಬಹಳ ಪ್ರೀತಿಸುತ್ತಿದ್ದರು.

ಇಬ್ಬರ ಶರೀರಗಳು ಬೇರೆ ಬೇರೆಯಾಗಿದ್ದರೂ ಆತ್ಮ ಒಂದೇ ಆಗಿತ್ತು.

ಅವರ ನಡುವೆ ಜಗಳ ಹೊಡೆದಾಟಗಳು ಎಂದೂ ನಡೆಯುತ್ತಿರಲಿಲ್ಲ.

ಒಬ್ಬರಿಗೋಸ್ಕರ ಇನ್ನೊಬ್ಬರು ಪ್ರಾಣ ಕೊಡಲೂ ಸಹಾ ಸಿದ್ಧರಿದ್ದರು.



ಒಂದು ದಿನ 'ಶೂ' ಗೆ ಕನ್ನಡಿ ಸಿಕ್ಕಿತು

ಒಂದು ದಿನ ಏನಾಯಿತು ಎಂದರೆ,

ಶೂ ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದನು.

ಆಗ ಮಣ್ಣಿನಲ್ಲಿ ಹುದುಗಿಕೊಂಡ ವಸ್ತುವೊಂದು ಅವನ ಕಣ್ಣಿಗೆ ಬಿತ್ತು.

ಅದು ಒಂದು ಗಾಜಿನ ಚೂರು.

ಆದರೆ ಶೂ ಇದಕ್ಕೆ ಮೊದಲು ಎಂದೂ ಗಾಜನ್ನೇ ನೋಡಿರಲಿಲ್ಲ.

ಅವನು ಎಂತಹುದಪ್ಪ ಈ ವಸ್ತು! ಎಂದು ಆಶ್ಚರ್ಯ ಪಟ್ಟನು.

ಆದರೂ ಅದನ್ನು ಎತ್ತಿಕೊಂಡು ಹಿಂದೆ ಮುಂದೆ ತಿರುಗಿಸಿ ನೋಡಿದನು.

ಮತ್ತು ಅದನ್ನು ತನ್ನ ಮುಖದ ಮುಂದೆ ಇಟ್ಟು ನೋಡುತ್ತಿದ್ದನು.



ಕನ್ನಡಿಯಲ್ಲಿ ಮುಖ ನೋಡಿಕೊಂಡು ಅಳತೊಡಗಿದನು

ಆಗ ಗಾಜಿನ ಚೂರಿನಲ್ಲಿ ಅವನಿಗೆ ತನ್ನದೇ ಮುಖ ಕಾಣಿಸಿತು.

ಆದರೆ ಆ ಮುಖ ತನ್ನದೇ ಎಂದು ಅವನಿಗೇನು ಗೊತ್ತು!

ಅವನು ಎಂದೂ ಅಂತಹಾ ಗಾಜಿನ ಚೂರನ್ನೇ ನೋಡಿರಲಿಲ್ಲ.

ಈ ಚಿತ್ರ ಯಾರದು? ಎಲ್ಲಿಂದ ಬಂತು? ಮುಂತಾದ ಪ್ರಶ್ನೆಗಳಿಂದ ಚಿಂತಿತನಾದನು, ಗಾಬರಿಗೊಂಡನು.

ಇಂತಹ ಮುಖವೊಂದನ್ನು ಮೊದಲು ಎಂದೋ ನೋಡಿದ ನೆನಪಾಯಿತು ಅವನಿಗೆ.


"ಓಹೋ, ನಮ್ಮ ತಂದೆ ಖಂಡಿತವಾಗಿ ಹೀಗೇ ಇದ್ದನು.

ಹಾಗಾದರೆ ಇದು ನಮ್ಮ ತಂದೆಯ ಚಿತ್ರ.

ನಮ್ಮ ತಂದೆಯ ಚಿತ್ರ ಇಲ್ಲಿಗೆ ಹೇಗೆ ಬಂತು?

ಅವನು ಸತ್ತು ಸುಮಾರು ವರ್ಷಗಳೇ ಕಳೆದಿವೆಯಲ್ಲಾ"

ಎಂದೆಲ್ಲಾ ಯೋಚಿಸುತ್ತಿದ್ದ. ಅವನಿಗೆ ತಂದೆಯ ನೆನಪಿನ ಜೊತೆಗೇ ದುಃಖ ಉಕ್ಕಿ ಉಕ್ಕಿ ಬಂತು. ಅವನು ಬಿದ್ದು ಬಿದ್ದು ಅಳತೊಡಗಿದನು.




ಕನ್ನಡಿಯನ್ನು ಗುಟ್ಟಾಗಿ ಮೇಲೆ ಇರಿಸಿದನು

ಸ್ವಲ್ಪ ಹೊತ್ತಿನ ನಂತರ ಶೂ ಮನೆಗೆ ಬಂದನು.

ಅವನು ಶೀಗೆ ಗಾಜಿನ ಸಂಗತಿಯನ್ನು ಹೇಳಲಿಲ್ಲ.

ಗಾಜಿನ ಚೂರನ್ನು ಅವನು ಗುಟ್ಟಾಗಿ ಬುಟ್ಟಿಯೊಂದರಲ್ಲಿ ಇಟ್ಟುಬಿಟ್ಟನು.

ಮತ್ತು ಒಂದು ಬುಟ್ಟಿಯನ್ನು ಅದರ ಮೇಲೆ ಮುಚ್ಚಿದನು.



ರಾತ್ರಿ ಹೊತ್ತಿನಲ್ಲಿ 'ಶೂ' ಕನ್ನಡಿ ನೋಡಿಕೊಂಡ

ಒಂದು ರಾತ್ರಿ ಹೀಗೆ ನಡೆಯಿತು.

ಶೀ ನಿದ್ದೆ ಮಾಡುತ್ತಿದ್ದಳು.

ಶೂ ಮೆಲ್ಲನೆ ಎದ್ದು ಗಾಜಿನ ಚೂರನ್ನು ಬುಟ್ಟಿಯಿಂದ ಹೊರತೆಗೆದನು.

ಗಾಜಿನಲ್ಲಿ ಅವನಿಗೆ ತನ್ನದೇ ಚಿತ್ರ ಕಾಣಿಸಿತು.

ಆ ಮುಖವನ್ನು ಅವನು ತನ್ನ ತಂದೆಯದೆಂದು ತಿಳಿದುಕೊಂಡಿದ್ದನಲ್ಲಾ,

ಹಾಗಾಗಿ ಗಾಜನ್ನು ನೋಡಿದಕೂಡಲೆ ಮತ್ತೆ ತಂದೆಯ ನೆನಪಾಗಿ ಬಿಕ್ಕಿ ಬಿಕ್ಕಿ ಅತ್ತನು.


ಅವನು ಅಳುತ್ತಿದ್ದ ಸಪ್ಪಳ ಕೇಳಿ ಶೀ ಎಚ್ಚೆತ್ತಳು.

ಆತುರಾತುರವಾಗಿ ಶೂ ಗಾಜಿನ ಚೂರನ್ನು ಬಚ್ಚಿಟ್ಟುಬಿಟ್ಟನು.

ಆದರೆ ಶೀ ನೋಡಿಬಿಟ್ಟಳು!

ಅವಳಿಗೆ ಚಿಂತೆಯಾಯಿತು. ಇವನು ನನ್ನಿಂದ ಏನನ್ನೋ ಮುಚ್ಚಿಡುತ್ತಿದ್ದಾನೆ!

ಏನನ್ನೋ ನೋಡಿ ನೋಡಿ ಅಳುತ್ತಿದ್ದಾನೆ. ಏನಿರಬಹುದು? ಎಂದು ಯೋಚನೆ ಮಾಡಲು ಆರಂಭಿಸಿದಳು.



'ಶೀ' ಕನ್ನಡಿ ನೋಡುತ್ತಿರುವುದು

ಮಾರನೇ ದಿನ ಶೂ ಜಮೀನಿನ ಬಳಿ ಹೋಗಿದ್ದನು.

ಶೀ ಒಬ್ಬಳೇ ಮನೆಯಲ್ಲಿದ್ದಳು.

ಅವಳು ಗಾಜನ್ನು ಹುಡುಕಿ ಹೊರತೆಗೆದಳು.


ಗಾಜಿನಲ್ಲಿ ಅವಳಿಗೆ ತನ್ನ ಮುಖ ಕಾಣಿಸಿತು.

ಅವಳಿಗೂ ಆಶ್ಚರ್ಯವಾಯಿತು.

"ಅಯ್ಯೋ ರಾಮಾ! ಇದು ಯಾವುದೋ ಸುಂದರ ಹುಡುಗಿಯೊಬ್ಬಳ ಚಿತ್ರ!

ಹಾಗಾದರೆ ಶೂ ಬೇರೆ ಯಾವುದೋ ಹುಡುಗಿಯನ್ನು ಪ್ರೇಮಿಸುತ್ತಿದ್ದಾನೆ.

ರಾತ್ರಿ ವೇಳೆಯಲ್ಲಿ ಎದ್ದು ಅವಳ ಚಿತ್ರವನ್ನು ನೋಡುತ್ತಾನೆ ಮತ್ತು ಬಿಕ್ಕಿ ಬಿಕ್ಕಿ ಅಳುತ್ತಾನೆ" ಹೀಗೆಯೇ ಯೋಚನೆ ಮಾಡುತ್ತಾ, ಅಸೂಯೆ ಪಡುತ್ತಾ ಸಪ್ಪಗಾಗಿ ಸೊರಗಿ ಹೋದಳು.



ಕನ್ನಡಿ ಕುರಿತು ಶೀ ಜಗಳ ತೆಗೆದಳು


ಸಂಜೆಯ ಹೊತ್ತಿಗೆ ಶೂ ಮನೆಗೆ ಮರಳಿದನು.

ನೋಡಿದರೆ ಶೀ ಮಲಗಿ ಅಳುತ್ತಿದ್ದಾಳೆ!

ಶೂ ಅತ್ಯಂತ ಪ್ರೀತಿಯಿಂದ ಕೇಳಿದನು. "ನನ್ನ ರಾಣಿ, ಏನು ವಿಷಯ?" ಎಂದು. ಅವಳು ಶೂ ಮೇಲೆ ಕೆಂಡಕಾರಲು ಪ್ರಾರಂಭಿಸಿದಳು.

"ಬೇರೊಬ್ಬ ಹುಡುಗಿಯನ್ನು ಪ್ರೀತಿಸುತ್ತಿರುವೆ. ರಾತ್ರಿ ಎದ್ದು ಅವಳ ಚಿತ್ರವನ್ನು ನೋಡುವೆ. ಈಗ ಮಾತ್ರ ಏನೂ ಗೊತ್ತಿಲ್ಲದವನ ಹಾಗೆ ನಟಿಸುತ್ತಾ ರಾಣಿ, ಏನು ವಿಷಯ ಎಂದು ಕೇಳುತ್ತಿದ್ದೀಯಾ?" ಶೂ, ಬೇರೆಯಾರನ್ನೂ ತಾನು ಪ್ರೇಮಿಸುತ್ತಿಲ್ಲ ಎಂದು ಎಷ್ಟು ಸಮಾಧಾನ ಮಾಡಲು ಪ್ರಯತ್ನಿಸಿದರೂ ಶೀ ಅವನನ್ನು ನಂಬಲೇ ಇಲ್ಲ. ಅವಳು ಬಿಕ್ಕುತ್ತಾ ಹೇಳಿದಳು, "ಹಾಗಾದರೆ ರಾತ್ರಿ ಎದ್ದೆದ್ದು ಯಾರ ಚಿತ್ರ ನೋಡುತ್ತೀಯೇ, ಹಾಗೇಕೆ ಬಿದ್ದು ಬಿದ್ದು ಅಳುತ್ತೀಯೇ?" ಈಗ ಶೂಗೆ ನಡೆದ ಸಂಗತಿ ಅರ್ಥವಾಯಿತು. ಅವನು ನಗುತ್ತಾ ಹೇಳಿದನು.

"ಅದು ನನ್ನ ತಂದೆಯ ಚಿತ್ರ, ಯಾವ ಹುಡುಗಿಯದೂ ಅಲ್ಲ" ಎಂದು. ಈಗಂತೂ ಶೀ ಕೋಪದಿಂದ ಹುಚ್ಚಾದಳು. ಅವಳು ತಕ್ಷಣ ಗಾಜನ್ನು ಕೊಟ್ಟಳು.



ಶೂ,ಶೀ ಳನ್ನು ಸಮಾಧಾನ ಪಡಿಸಿದನು

ಶೂಗೆ ಗಾಜಿನ ಚೂರನ್ನು ತೋರಿಸಿ, "ತೆಗೆದುಕೋ, ನೋಡು, ಇದು ನಿಮ್ಮ ತಂದೆಯ ಚಿತ್ರವೇನು?" ಎಂದು ಕೇಳಿದಳು. ಶೂ ಗಾಜನ್ನು ತೆಗೆದುಕೊಂಡು ನೋಡಿದನು.

ಅವನಿಗೆ ತನ್ನ, ಅದೇ ಮುಖ ಕಾಣಿಸಿತು.

ಯಾವ ಚಿತ್ರವನ್ನು ಅವನು ತನ್ನ ತಂದೆಯ ಚಿತ್ರವೆಂದು ಭಾವಿಸಿದ್ದನೋ ಅದೇ ಮುಖದ ಚಿತ್ರ!

ಶೂ ರೇಗುತ್ತಾ "ತೆಗೆದುಕೋ ನೀನೇ ನೋಡು"

ಇದು ತಂದೆಯ ಚಿತ್ರ ಅಲ್ಲದೆ ಇನ್ನ್ಯಾರದು ?" ಎಂದನು.

ಶೀ ಮತ್ತೆ ಗಾಜಿನಲ್ಲಿ ನೋಡಿದಳು.

ಅವಳಿಗೆ ಕಂಡದ್ದು ತನ್ನದೇ ಮುಖ.

ಯಾವ ಮುಖವನ್ನು ನೋಡಿ ಯಾವುದೋ ಹುಡುಗಿಯ ಮುಖವಿರುವ ಚಿತ್ರವೆಂದು ಭಾವಿಸಿದ್ದಳೋ ಅದೇಮುಖ!

ಈಗ ಅವಳಿಗೆ ಸಿಟ್ಟು ಇನ್ನೂ ನೆತ್ತಿಗೇರಿತು.

ಅವಳು "ನನ್ನನ್ನು ಹುಚ್ಚಳೆಂದು ತಿಳಿದಿದ್ದೀಯೇನು ನೀನು? ಯಾವುದಾದರೂ ಒಬ್ಬ ಕುರುಡನಿಗೆ ತೋರಿಸಿದರೂ ಇದೊಂದು ಹುಡುಗಿಯ ಚಿತ್ರವೆಂದು ಹೇಳಬಲ್ಲ. ಅಂತಹುದರಲ್ಲಿ ನೀನು ಅದನ್ನು ನಿಮ್ಮ ತಂದೆಯ ಚಿತ್ರವೆಂದು ಹೇಳುತ್ತೀಯಲ್ಲಾ"



ಜೋಗಿ ಕನ್ನಡಿ ನೋಡಿದನು


ಇಬ್ಬರೂ ಸುಮಾರು ಹೊತ್ತಿನವರೆಗೆ ಪರಸ್ಪರ ನೀನು ನೀನು, ನಾನು ನಾನು, ಎಂದು ದೂಷಿಸುತ್ತಾ ವಾದಿಸುತ್ತಾ ಇದ್ದರು.

ಅಷ್ಟರಲ್ಲಿ ಒಬ್ಬ ಜೋಗಿ ಅಲ್ಲಿಗೆ ಬಂದನು.

ಅವನೊಂದಿಗೆ ಶೀ ಹೀಗೆಂದಳು "ಸ್ವಾಮೀಜೀ, ನೀವು ಈ ಚಿತ್ರವನ್ನು ನೋಡಿ, ಯಾರದೆಂದು ಹೇಳಬೇಕು. ಖಂಡಿತವಾಗಿಯೂ ಇದು ಯಾವುದಾದರೂ ಹುಡುಗಿಯ ಚಿತ್ರವೇ ಅಥವಾ ಅಲ್ಲವೇ ಹೇಳಿ.ನನ್ನ ಗಂಡ ಇದನ್ನು ತನ್ನ ತಂದೆಯ ಚಿತ್ರವೆಂದು ಹೇಳುತ್ತಾನೆ ಸ್ವಾಮಿ,ಈಗ ನೀವೇ ನೋಡಿ ತೀರ್ಮಾನ ಮಾಡಿ.

ಇದು ಯಾರ ಚಿತ್ರವೆಂದು ಹೇಳಿ"

ಜೋಗಿ ಕೂಡ ಎಂದೆಂದೂ ಗಾಜನ್ನು ನೋಡಿರಲೇ ಇಲ್ಲ. ಅವನಿಗೆ ಕೂಡ ಗಾಜಿನ ಚೂರಿನಲ್ಲಿ ತನ್ನದೇ ಮುಖ ಕಾಣಿಸಿತು. ಆದರೆ ಅವನು ಅದನ್ನು ಯಾವುದೋ ಮಹಾತ್ಮನ ಚಿತ್ರವೆಂದು ಅಂದುಕೊಂಡನು. ಮತ್ತು ಅವರಿಬ್ಬರಿಗೂ ಹೇಳಿದ "ನೀವಿಬ್ಬರೂ ಮೂರ್ಖರು, ಈ ಚಿತ್ರ ಯಾವುದೋ ಪ್ರಸಿದ್ಧ ಮಹಾತ್ಮನದು"



ಮೂವರೂ ಕನ್ನಡಿಯಲ್ಲಿ ನೋಡಿಕೊಂಡರು

ಈಗಂತೂ ಶೂ ಮತ್ತು ಶೀ ಇಬ್ಬರೂ ದಂಗಾಗಿ ಕೂತರು.

ಇಬ್ಬರೂ ಒಮ್ಮೆ ಜೋಗಿಯ ಕಡೆ ನೋಡುತ್ತಾರೆ. ಮತ್ತೊಮ್ಮೆ ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾರೆ!

ಜೋಗಿಯು, ಅವರಿಬ್ಬರೂ ದಂಗಾಗಿ ನಿಂತದ್ದನ್ನು ನೋಡಿ, "ಏಕೆ ಗಾಬರಿಯಾಗಿದ್ದೀರಿ? ಬನ್ನಿ ನೀವೇ ನೋಡಬನ್ನಿ"

ಈಗ ಮೂರು ಜನ ಜೊತೆಯಾಗಿ ಗಾಜಿನ ಚೂರನ್ನು ನೋಡಿದರು.

ಗಾಜಿನಲ್ಲಿ ಮೂರೂ ಜನರ ಮುಖ ಕಾಣಿಸಿತು.

ಈಗ ಮೂರು ಜನ ಆಶ್ಚರ್ಯದಿಂದ ದಂಗಾದರು.

ಮೂವರೂ ಒಮ್ಮೆ ಗಾಜಿನ ಚೂರನ್ನು ನೋಡುತ್ತಾರೆ. ಒಮ್ಮೆ ಒಬ್ಬೊರನ್ನೊಬ್ಬರು ನೋಡುತ್ತಾರೆ!



ಕನ್ನಡಿಯನ್ನು ಬಾವಿಯಲ್ಲಿ ಎಸೆದರು

ಶೀ ಇನ್ನೂ ಹೆಚ್ಚಿನ ಆತಂಕದಿಂದ.

ಶೂ, ನೀನು ಮತ್ತು ಈ ಜೋಗಿ ಇಬ್ಬರೂ ಆ ಹುಡುಗಿಯ ಜೊತೆಯಲ್ಲಿ!" ಎಂದಳು.

ಶೂ ಹೇಳಿದ, "ನೀನು ಮತ್ತು ಈ ಜೋಗಿ ಇಬ್ಬರೂ ನನ್ನ ತಂದೆಯ ಜೊತೆಯಲ್ಲಿ!"


ಮೂರು ಜನ ಸೋಜಿಗಪಡುತ್ತಾ ಮಾತಿಲ್ಲದೆ, ಒಬ್ಬರನ್ನೊಬ್ಬರು ನೋಡುತ್ತಾ ನಿಂತರು.

ಸ್ವಲ್ಪ ಹೊತ್ತು ಮೂರು ಜನ ಮೌನವಾಗಿದ್ದರು.

ನಂತರ ಜೋಗಿ ಹೇಳಿದ "ಇದು ಜಾದೂ, ಅದ್ಭುತವಾದ ಜಾದೂ"

ಇದನ್ನು ಗುಟ್ಟಾಗಿ ಬಾವಿಯಲ್ಲಿ ಎಸೆದು ಬಿಡಿ".

ಅದರಂತೆ ಅವರುಗಳು ಗಾಜನ್ನು ಒಂದು ಬಾವಿಯಲ್ಲಿ ಎಸೆದುಬಿಟ್ಟರು.



ಮೂವರೂ, ಕನ್ನಡಿಯನ್ನು ಯಾವುದೋ ಮಂತ್ರ ಶಕ್ತಿ ಎಂದು ತಿಳಿದರು

ಆ ಜೋಗಿ, ಶೂ ಮತ್ತು ಶೀ ಗಾಜಿನ ಚೂರನ್ನು ನೋಡಿಯೇ ಇರಲಿಲ್ಲ.

ನಿಜವಾಗಿ ಹೇಳಬೇಕೆಂದರೆ ಆ ಗಾಜಿನ ಚೂರು

ಒಂದು ಕನ್ನಡಿಯ ತುಣುಕು ಆಗಿತ್ತು.

ಆದರೆ ಮೂರೂ ಜನ ಅದನ್ನು ಜಾದೂ ಅಂದರೆ,

"ಮಂತ್ರಶಕ್ತಿಯುಳ್ಳ" ವಸ್ತುವೆಂದು ತಪ್ಪಾಗಿ ತಿಳಿದರು.

ಆದರೆ ಅದು ಬರಿ ಕನ್ನಡಿ ಅಷ್ಟೆ, ಜಾದೂ ಅಲ್ಲ.

ನಿಜವಾಗಿ ನೋಡಿದರೆ ಜಾದೂ, ಇಂದ್ರಜಾಲ ಎನ್ನುವುದು

ಇಲ್ಲವೇ ಇಲ್ಲ. ಇದೆಲ್ಲ ಬುದ್ಧಿಯ ಪೇಚಾಟದ ಫಲ.

ಅಂದರೆ ಯಾವುದೇ ವಿಷಯವನ್ನು ತಿಳಿಯಲು ಆಗದೆ ಇರುವಾಗ ನಾವು ಕಂಡುಕೊಂಡ ಉಪಾಯ. ಅದನ್ನು 'ಜಾದೂ' ಎಂದು ಕರೆಯುವುದು.

ನಾವು ಯಾವ ವಿಷಯವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲವೋ

ಅದನ್ನೇ ಮಾಯ, ಮಂತ್ರವೆಂದು ತಳ್ಳಿಹಾಕುತ್ತೇವೆ.

ಇಲ್ಲ, ಭೂತ, ಪ್ರೇತ ಮುಂತಾದ ಹೆಸರುಗಳಿಂದ ಕರೆಯುತ್ತೇವೆ.

ಇಲ್ಲ ಮದ್ದು, ಮಾಟ ಎಂದೂ ಹೇಳುತ್ತೇವೆ.

ಮತ್ತು, ಈ ರೀತಿಯಲ್ಲಿ ನಮ್ಮ ಮನಸ್ಸಿಗೆ ಸಮಾಧಾನ ಹೇಳುತ್ತೇವೆ.

ಶಾಂತಿ ತಂದುಕೊಳ್ಳುತ್ತೇವೆ.

* * *

ಕನ್ನಡ ವಿಶ್ವವಿದ್ಯಾ ಪ್ಪಿದವರೆಗೆ ಉತ್ತಮ
ಹಾಗೂ ಉಪಯು ಪಠ್ಯಪುಸ್ತಕ ರಚನಾ
ವಿಭಾಗ'ವನ್ನು ತೆ ಪಠ್ಯಪುಸ್ತಕ ರಚನೆ
ಮಾಡಬೇಕೆಂದು ನವಸಾಕ್ಷರರಿಗಾಗಿ
ಪುಸ್ತಕ ಬರೆಸುವ ಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾಲಯವ ಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು, ರೆಲ್ಲರ ಅಭಿಪ್ರಾಯ,
ಸಲಹೆ, ಸಹಕಾರಗ ಮುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ ನೇಕ ಸಲ ಚರ್ಚಿಸಿ
ಯೋಜನೆಯನ್ನು

ನವಸಾಕ್ಷರರಿಗಾಗಿ ೀ ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ ಭಾಷಾತಜ್ಞರಿಂದ
ಪರಿಶೀಲಿಸಲಾಯಿ ಸಿಕೊಂಡು ಅವರಿಗೆ
ಕಮ್ಮಟಗಳನ್ನು ಂತ ಆಯ್ದ ಜಿಲ್ಲೆ,
ತಾಲೂಕುಗಳಿಗೆ ರುವವರಿಂದ ಅದರ
ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕಋ ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು